ಉಪಾಧ್ಯಕ್ಷರು : ಇದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜರವರು ಮಾತನಾಡುತ್ತಾರೆ, ಒಟ್ಟಿಗೆ ಉತ್ತರ ಕೊಟ್ಟುಬಿಡಿಯ

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಇದಕ್ಕೆ ಯಾರು ಸಚಿವರು ಎನ್ನುವುದೇ ಅನುಮಾನ ಬಂದುಬಿಟ್ಟಿದೆ. ಒಂದೊಂದು ಸಾರಿ ಒಬ್ಬೊಬ್ಬ ಸಚಿವರು ಉತ್ತರ ಕೊಡುತ್ತಾರೆ. ಮುಖ್ಯಮಂತ್ರಿಗಳು ಎನು ಮಾಡಿದ್ದಾರೆ ಎಂದರೆ ಒಂದು ಇಲಾಖೆಯನ್ನು ಹಿಡಿದು 12 ಭಾಗ ಮಾಡಿ ಹಂಚಿರುವುದೇ ಇದಕ್ಕೆ ಎಲ್ಲಾ ಕಷ್ಟವಾಗಿರುವುದು. ಮಾನ್ಯ ಸಚಿವರಲ್ಲಿ ನಾನು ಅಪಾದನೆ ಮಾಡುತ್ತಿಲ್ಲ. ವಸ್ತು ಸ್ಥಿತಿಯನ್ನು ನೀವು ಅರಿತುಕೊಂಡಿದ್ದೀರಾ ಎಂಬ ನನ್ನ ಒಂದು ನೇರವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಕೊಬ್ಬರಿ ವ್ಯಾಪಾರಸ್ಥರ ವಸ್ತು ಸ್ಥಿತಿಯನ್ನು ನೀವು ಅರಿತುಕೊಂಡಿದ್ದರೆ, ಅಧಿಕಾರಿಗಳು ಎನು ಒಂದು ಹೇಳಿ ಬರೆದು ಕೊಡುತ್ತಾರೆ ಅದನ್ನು ನೀವು ಓದುತ್ತೀರಿ ಎಂದು ನಾನು ಹೇಳುತ್ತಿಲ್ಲ. ನೀವು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸ್ಥಳೀಯ ಮಾರುಕಟ್ಟೆಯಲ್ಲಿ ಎನು ಪರಿಸ್ಥಿತಿ ಇದೆ, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅನ್ಯಾಯ ಇದರ ಬಗ್ಗೆ ವಸ್ತು ಸ್ಥಿತಿಯನ್ನು ಅರಿತು ಹೇಳಿಕೆ ಕೊಟ್ಟರೆ ಬಹಳ ಸಂತೋಷವಾಗುತ್ತದೆ. ಮತ್ತೊಮ್ಮೆ ನಾನು ಕೇಳುವುದು, ತಾವು ಕೊಡಲೇ, ನಾಳೆ ಬೆಳಿಗ್ಗೆ ನೀವು, ನಿಮ್ಮ ಒಂದು ಟೀಮನ್ನು ಕರೆದುಕೊಂಡು ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಬೇಕು. ಮತ್ತು ಕೇಂದ್ರದ ಬೆಂಬಲ ಬೆಲೆಯನ್ನು ಕೊಡಿಸಲಿಕ್ಕೆ ನಿಮಗೆ ಇರತಕ್ಕಂಥ ತೊಂದರೆ ಏನು, ಎನ್ನುವುದನ್ನು ನೇರವಾಗಿ ಹೇಳಿ. ಈ ರೀತಿ ತೊಂದರೆ ಇದೆ ಎಂದು ಹೇಳಿ. ಈ ರೀತಿ ತೊಂದರೆ ಇದ್ದರೆ ನಾವು ಒಂದು ನಿಯೋಗ ಹೋಗುತ್ತೇವೆ. ಅದನ್ನಾದರೂ ಹೇಳಿ, ಇಷ್ಟೆಲ್ಲಾ ಹೇಳಿದರೂ ನೀವು ಒಂದು ಸ್ಪಷ್ಟವಾದ ಭರವಸೆಯನ್ನು ಕೊಡಿ. ಇನ್ನು ನಾಲ್ಕು ದಿವಸ ಶಾಸನ ಸಭೆ ಇರುವುದು. ಅಮೇಲೆ ನಿಮ್ಮನ್ನು ನಾವು ಕೇಳುವುದಿಲ್ಲ, ನಮ್ಮನ್ನು ನೀವು ಕೇಳುವುದಿಲ್ಲ. ಈ ಪರಿಸ್ಥಿತಿ ನಿವಾರಣೆಗೆ ನೀವು ಸ್ಪಷ್ಟವಾದ ಭರವಸೆಯನ್ನು ಈ ಸಭೆಗೆ ಕೊಡಿ.

ಶ್ರೀ ರಾಮಲಿಂಗರೆಡ್ಡಿ : ನ್ಯಾಷನಲ್ ಮಾರ್ಕೆಟಿಂಗ್ ಫೆಡರೇಷನ್‌ನವರು ಏನು ಪರ್ಚೇಸ್ ಮಾಡುತ್ತಿದ್ದಾರೆ, ಅವರ ಜೊತೆ ನಾವು ಸಾಕಷ್ಟು ಪತ್ರವ್ಯವಹಾರವನ್ನೂ ಕೂಡ ಮಾಡಿದ್ದೇವೆ. ಇದು ನಮ್ಮ ಇಲಾಖೆಯ ಕಾಳಜಿ ಎಂಬುದು ತಮಗೂ ಗೊತ್ತಾಗಿದೆ. ಆ ನ್ಯಾಷನಲ್ ಮಾರ್ಕೆಟಿಂಗ್ ಫೆಡರೇಷನ್‌ನವರು ನಿನ್ನೆಯಿಂದ 60 ಕ್ವಿಂಟಾಲ್‌ಗಳನ್ನು ಖರೀದಿ ಮಾಡಲು ಪ್ರಾರಂಭ ಮಾಡಿದ್ದಾರೆ. ಇವತ್ತು ನಾಳೆ ನೋಡೋಣ, ಅವರು ಖರೀದಿ ಮಾಡಲಿಲ್ಲ ಎಂದರೆ ನಾವು ಕೇಂದ್ರದ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಪರ್ಚೇಸ್ ಮಾಡುವಂತೆ ಮಾಡೋಣ ಮತ್ತು ಬೆಂಬಲ ಬೆಲೆಯನ್ನು ಕೊಡುವಂತೆ ಮಾಡೋಣ.

ಗೊಂದಲ

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ ಹಾಗೂ ಶಿವರಾಮೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಉಪಾಧ್ಯಕ್ಷರು : ಮಾಧುಸ್ವಾಮಿಯವರು, ಶ್ರೀ ಶಿವರಾಮೇಗೌಡರು ಹೇಳಿದ್ದನ್ನು ದಾಖಲು ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ ನಾವು ಹೊರ ಹೋಗುತ್ತಿದ್ದೇವೆ. (ಶ್ರೀ ಮಾಧುಸ್ವಾಮಿಯವರು ಮತ್ತು ಶ್ರೀ ವಾಟಾಳ್ ನಾಗರಾಜ್‌ಅವರು ಸಭಾತ್ಯಾಗ ಮಾಡಿದರು.)